



ಜಲಪಾತದ ಬಳಿ ಕಂಡ ಹಕ್ಕಿಗಳು

ಕಳಿಸಿತು. ಆದರೆ ಇಲ್ಲಿಯ ಮೂಲ ನಿವಾಸಿಗಳಾದ ಪಲುಸ್ ಮತ್ತವರ ಬೆಂಬಲಿಸುವ ಇತರ ಬುಡಕಟ್ಟಿನ ಜನರು ಈ ಸೈನ್ಯವನ್ನು ಸೋಲಿಸಿ ಓಡಿಸಿದರಾದರೂ, ಅದೊಂದು ಬೇಸಿಗೆಯಲ್ಲಿ ಕರ್ನಲ್ ರೈಟ್ ಎನ್ನುವ ಸೈನ್ಯಾಧಿಕಾರಿಯ ನೇತೃತ್ವದಲ್ಲಿ ಬಂದ ಸೈನ್ಯವೊಂದು ಮೂಲ ನಿವಾಸಿಗಳ ಕೈಯಿಂದ ಈ ಪ್ರದೇಶವನ್ನು ಕಿತ್ತುಕೊಂಡು ಅಮೆರಿಕ ಸರ್ಕಾರಕ್ಕೆ ಸೇರಿಸಿತು. 2014 ರಲ್ಲಿ ಇದು ರಾಜ್ಯ ಸರಕಾರದ ಜಲಪಾತವಾಗಿ ಅಧಿಕೃತ ದಾಖಲಾಯಿತು.

ಈ ಜಲಪಾತದ ವೈಶಿಷ್ಟ್ಯವೆಂದರೆ, ಮೇಲಿನಿಂದ ನೋಡಿದರೆ ನದಿ ಎಲ್ಲಿಂದ ಹರಿದು ಬರುತ್ತದೆ ಎಂಬುದೇ ತಿಳಿಯುವುದಿಲ್ಲ, ಕಾರಣ ನದಿ ಹರಿದು ಬರುವುದೂ ದೊಡ್ಡ ಕಂದಕದಲ್ಲಿ. ಸುತ್ತ ಮುತ್ತ ಅಲ್ಪ ಸ್ವಲ್ಪ ಕುರುಚಲುಗಳಿರುವ ಕಲ್ಲು ಹಾಸುಗಳು. ಜಲಪಾತವಾಗುವ ಜಾಗದಲ್ಲಿ ಒಂದು ದೊಡ್ಡ ನೀರಿನ ಹರಿವನ್ನೇ ನಿರ್ಮಿಸಿದೆ. ಮುಂದೆ ನೀರು ಹರಿದು ಹೋಗುವ ಮಾರ್ಗ ಕೂಡ ದೊಡ್ಡ ಕಂದಕ. ಇವೆಲ್ಲವೂ ಸಾವಿರಾರು ವರ್ಷಗಳ ಹಿಂದೆ ಹಿಮ ಸರೋವರ ಉಕ್ಕಿ ಹರಿದ ಪರಿಣಾಮವಾಗಿ ಆದ ನಿರ್ಮಿತಿಗಳು.

ಇಲ್ಲಿ ಹಲವೆಡೆ ಪ್ರವಾಸಿಗಳಿಗೆ ಅನುಕೂಲವಾಗುವಂತೆ ನೋಡುವ ವೀಕ್ಷಣಾ ತಾಣಗಳನ್ನು ರೂಪಿಸಿದ್ದಾರೆ. ಅಮೆರಿಕದ ಪ್ರವಾಸಿ ತಾಣಗಳ ವಿಶೇಷವೆಂದರೆ ಮೂಲಸೌಕರ್ಯಗಳ ವ್ಯವಸ್ಥೆ. ಶೌಚಾಲಯ ಇತ್ಯಾದಿ. ಇಲ್ಲಿ ಕ್ಯಾಂಪಿಂಗ್ ಸೌಲಭ್ಯವೂ ಇರುವುದರಿಂದ, ಸ್ವಚ್ಛ ಆಕಾಶದ ವೀಕ್ಷಣೆಗಾಗಿ ರಾತ್ರಿ ಕ್ಯಾಂಪ್ ಕೂಡ ನಡೆಯುತ್ತದೆ. ಪಕ್ಷಿ ವೀಕ್ಷಣೆಗೂ ಅವಕಾಶವಿದೆ.

ನಾವು ಜಲಪಾತದಿಂದ ಇನ್ನೊಂದು ಮಾರ್ಗವಾಗಿ ಹೊರಟೆವು. ಇದು ಶುದ್ಧ ಮರುಭೂಮಿಯಂತಹ ಪ್ರದೇಶ. ಇಲ್ಲಿ ಒಂದೆಡೆ ಬೃಹತ್ ಸರೋವರವಿದ್ದರೆ ಇನ್ನೊಂದೆಡೆ ಕಪ್ಪು ಮರಳಿನ ಹಾಸು ಇದೆ. ಇಲ್ಲಿ ದುಬೈನ ಮರುಭೂಮಿಯಲ್ಲಿ ಕ್ರೀಡೆಗೆ ಉಪಯೋಗಿಸುವ ಕ್ವಾಡ್ ಬೈಕ್ ಎನ್ನುವ ನಾಲ್ಕು ಚಕ್ರದ ಬೈಕ್ ಬಾಡಿಗೆಗೆ ಸಿಗುತ್ತದೆ.

ಪಲೌಸ್ ಜಲಪಾತ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶ ಅತ್ಯಂತ ವಿಶಿಷ್ಟವಾಗಿದೆ. ಅಗಾಧ ಪ್ರಮಾಣದ ಗೋಧಿ, ಬಾರ್ಲಿ, ಕಾಳು ಕಡಿಯ ಹೊಲಗಳು, ಮರುಭೂಮಿಯಂತಹ ಪ್ರದೇಶಗಳು, ಮಧ್ಯೆ ಹರಿಯುವ ಬೃಹತ್ ಕೊಲಂಬಿಯಾ ನದಿ– ಇವೆಲ್ಲ ವಿಭಿನ್ನ ಅನುಭವ ನೀಡುವಂಥವು.